ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಬೆಂಗಳೂರು-1

ಸಂಖ್ಯೆ:ಸಿ8(4)ಶಾಶಿ. ಸಾ.ಮು.1:2002-03.

ದಿನಾಂಕ :17-09-2002.

ಸರ್ಕಾರದ ಆದೇಶ ಸಂಖ್ಯೆ:ಇಡಿ 69 ವಿವಿಧ 2002 ದಿನಾಂಕ: 13-09-2002 ರಲ್ಲಿ ಆದೇಶಿಸಿರುವಂತೆ ದಿನಾಂಕ:19-08-2002ರಿಂದ 23-08-2002ರ 5 ದಿನಗಳ ಮುಷ್ಕರದ ಅವಧಿಯನ್ನು ಪ್ರತಿಯೊಬ್ಬ ನೌಕರರ ಹಕ್ಕಿನಲ್ಲಿರುವ ಮತ್ತು ಲಭ್ಯವಾಗುವ ರಜೆಯನ್ನು ಮಂಜೂರು ಮಾಡಿ ಮುಷ್ಕರದ ಅವಧಿಯನ್ನು ಸಕ್ರಮಗೊಳಿಸಲು ಆದೇಶಿಸಿದೆ.

ನಿರ್ದೇಶಕರ ಪರವಾಗಿ,
(ಪ್ರೌಢ ಶಿಕ್ಷಣ)

ಪ್ರತಿಗಳನ್ನು:

೧) ರಾಜ್ಯದ ಎಲ್ಲಾ ಸಹ ನಿರ್ದೇಶಕರುಗಳಿಗೆ,

೨) ರಾಜ್ಯದ ಎಲ್ಲಾ ಉಪ ನಿರ್ದೇಶಕರುಗಳಿಗೆ,

೩) ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ,

೪) ಕಛೇರಿ ಪ್ರತಿ.

(13)

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:— ದಿನಾಂಕ 19-08-2002 ರಿಂದ ದಿನಾಂಕ 23-08-2002ರವರೆಗೆ ಅನುದಾನಿತ ಶಾಲಾ ಕಾಲೇಜುಗಳ ನೌಕರರ ಮುಷ್ಕರದ ಅವಧಿಯ ಸಕ್ರಮತೆ.

ಓದಲಾಗಿದೆ:— ದಿನಾಂಕ 27-08-2002ರ ಜನತಾದಳ (ಸಂಯುಕ್ತ) ಶಾಸಕರ ಪಕ್ಷದ ನಾಯಕರು ಹಾಗೂ ವಿಧಾನ ಪರಿಷತ್ತಿನ ಸದಸ್ಯರು ಆದ ಶ್ರೀ ಬಸವರಾಜ ಎಸ್ ಹೊರಟ್ಟಿಯವರ ಪತ್ರ.

Strike Period

ಪ್ರಸ್ತಾವನೆ:

1) ಖಾಸಗಿ ಅನುದಾನಿತ ಶಾಲಾ ಕಾಲೇಜುಗಳ ಅಧಿಕೃತ ಸಂಘಟನೆಗಳು ಹಾಗೂ ನೌಕರರ ಸಂಘಟನೆಗಳು ಹಲವು ಬೇಡಿಕೆಗಳನ್ನು ಮುಂದಿಟ್ಟುಕೊಂಡು ಅವುಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ದಿನಾಂಕ 19-08-2002ರಿಂದ 23-08-2002ರವರೆಗೆ ಕರ್ತವ್ಯವನ್ನು ಬಹಿಷ್ಕರಿಸಿ ಮುಷ್ಕರ ನಡೆಸಿದರು. ನಂತರ ದಿನಾಂಕ 23-08-2002ರಂದು ನಡೆದ ಸಂಧಾನದ ಫಲವಾಗಿ ಮುಷ್ಕರವನ್ನು ದಿನಾಂಕ 24-08-2002ರಿಂದ ಜಾರಿಗೆ ಬರುವಂತೆ ಸ್ಥಗಿತಗೊಳಿಸಲಾಯಿತು.

2) ದಿನಾಂಕ 23-08-2002ರ ಸಂಧಾನದಲ್ಲಿ ತೀರ್ಮಾನಿಸಿದಂತೆ 5 ದಿನಗಳ ಮುಷ್ಕರದ ಅವಧಿಯನ್ನು ಹೆಚ್ಚುವರಿಯಾಗಿ ತರಗತಿಗಳನ್ನು ನಡೆಸಿ ಸರಿದೂಗಿಸಿಕೊಳ್ಳಬೇಕು ಎಂಬ ಷರತ್ತಿಗೆ ಒಳಪಟ್ಟು ಭಾನುವಾರ ಹಾಗೂ ಇತರೆ ರಜಾದಿನಗಳಲ್ಲಿಯೂ ಸಹ ತರಗತಿಗಳನ್ನು ನಡೆಸಲು ನಿಶ್ಚಯಿಸಿರುವುದರಿಂದ ಮೇಲ್ಕಂಡ ಮುಷ್ಕರದ ಅವಧಿಯನ್ನು ಸಕ್ರಮಗೊಳಿಸಲು ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಸವರಾಜ ಎಸ್. ಹೊರಟ್ಟಿಯವರು ಕೋರಿರುತ್ತಾರೆ.

3) ಪ್ರಸ್ತುತ ವಿಷಯವನ್ನು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಯ 106-ಬಿ ನಿಯಮದೊಂದಿಗೆ ಓದಲಾದ 1966 ಕರ್ನಾಟಕ ರಾಜ್ಯ ನಾಗರಿಕ ಸೇವಾ (ಮುಷ್ಕರದ ತಡೆ) ಅಧಿನಿಯಮದ ಹಾಗೂ 1999ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ ಹಾಗೂ ಸೇವಾ ಷರತ್ತುಗಳು ಮತ್ತು ನಿಬಂಧನೆಗಳು) ನಿಯಮಾವಳಿಯ 26ನೇ ನಿಯಮದ ಉಪಬಂಧಗಳ ಬೆಳಕಿನಲ್ಲಿ ಪರಿಶೀಲಿಸಲಾಗಿದೆ. ಸಾಮಾನ್ಯವಾಗಿ ಮುಷ್ಕರದ ಅವಧಿಯನ್ನು ವೇತನ ರಹಿತ ಅವಧಿ ಎಂದು ಘೋಷಿಸಬೇಕಾಗುತ್ತದೆ. ಆದರೆ ಪ್ರಸಕ್ತ ಪ್ರಕರಣದಲ್ಲಿ ಸಹಾನುಭೂತಿಯ ದೃಷ್ಟಿಯಿಂದ ಪರಿಗಣಿಸಲಾಗಿದೆ.

**<u>ಸರ್ಕಾರಿ ಆದೇಶ ಸಂಖ್ಯೆ: ಇಡಿ 69 ಬಿಡಿಡಿ 2002, ಬೆಂಗಳೂರು, ದಿನಾಂಕ 13-09-2002</u>**

4) ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಯ 106-ಬಿ ನಿಯಮವನ್ನು ಮತ್ತು 1966ರ ಕರ್ನಾಟಕ ರಾಜ್ಯ ನಾಗರಿಕ ಸೇವಾ (ಮುಷ್ಕರದ ತಡೆ) ಅಧಿನಿಯಮವನ್ನು ಸಡಿಲಿಸಿ ಅನುದಾನಿತ ಶಾಲಾ ಮತ್ತು ಕಾಲೇಜುಗಳ ನೌಕರರು ದಿನಾಂಕ 19-08-2002ರಿಂದ ದಿನಾಂಕ 23-08-2002ರವರೆಗೆ 5 ದಿನಗಳಲ್ಲಿ ನಡೆಸಿದ ಮುಷ್ಕರದ ಅವಧಿಯನ್ನು ಪ್ರತಿಯೊಬ್ಬ ನೌಕರರ ಹಕ್ಕಿನಲ್ಲಿರುವ ಮತ್ತು ಲಭ್ಯವಾಗುವ ಹಾಗೂ ದೊರೆಯಬೇಕಾದ ರಜೆಯನ್ನು ಮಂಜೂರು ಮಾಡಿ ಮುಷ್ಕರದ ಅವಧಿಯನ್ನು ಸಕ್ರಮಗೊಳಿಸಲು ಮಂಜೂರಾತಿ ನೀಡಲಾಗಿದೆ.

5) ದಿನಾಂಕ 07-09-2002 ಸಂಖ್ಯೆ: ಆಇ 831 ವೆಚ್ಚ-(8) 2002ರ ಅನಧಿಕೃತ ಟಿಪ್ಪಣಿಯಲ್ಲಿ ಆರ್ಥಿಕ ಇಲಾಖೆಯ ಸಹಮತಿಯನ್ನು ಪಡೆದು ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್. ನಾಗರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ)